Media Coordinator
EQUATOR
Full Circle MPR Consulting

# ಇನ್ನೆರಡು ವರ್ಷದಲ್ಲಿ ನ್ಯಾನೋ ಕೇಂದ್ರ

## ಡಿಸೆಂಬರ್‌ನಲ್ಲಿ ಎರಡನೇ ಬೆಂಗಳೂರು ನ್ಯಾನೊ ಸಮಾವೇಶ

ಟೈಮ್ಸ್ ನ್ಯೂಸ್ ನೆಟ್‌ವರ್ಕ್

**ಬೆಂಗಳೂರು:** ಈಗಾಗಲೇ ಐಟಿ-ಬಿಟಿ ರಾಜಧಾನಿಯಾಗಿರುವ ಬೆಂಗಳೂರು ಈಗ ಇನ್ನೊಂದು ಗರಿಯನ್ನು ಮುಡಿಗೇರಿಸಲು ಸಜ್ಜಾಗಿದೆ. ಇನ್ನೆರಡು ವರ್ಷಗಳಲ್ಲಿ ನಗರದಲ್ಲಿ 'ನ್ಯಾನೊ ವಿಜ್ಞಾನ ಕೇಂದ್ರ' ತಲೆ ಎತ್ತಲಿದೆ.

ಡಿಸೆಂಬರ್ 12ರಿಂದ 14ರವರೆಗೆ ನಗರದಲ್ಲಿ ನಡೆಯಲಿರುವ ಎರಡನೇ 'ಬೆಂಗಳೂರು ನ್ಯಾನೊ' ಸಮಾವೇಶದ ಸಿದ್ಧತೆಗೆ ಬುಧವಾರ ಚಾಲನೆ ನೀಡಿದ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಆನಂದ್ ಅಸ್ನೋಟಿಕರ್ ಬೆಂಗಳೂರನ್ನು ನ್ಯಾನೊ ಕೇಂದ್ರವನ್ನಾಗಿ ರೂಪಿಸಲು ಸರ್ಕಾರ ಬದ್ಧವಾಗಿದ್ದು, ಬಜೆಟ್‌ನಲ್ಲಿ ಹೆಚ್ಚಿನ ನೆರವು ನೀಡಲಾಗುವುದು ಎಂದರು.

ಕೇಂದ್ರ ಸರ್ಕಾರ ಬೆಂಗಳೂರು, ಕೋಲ್ಕತ್ತ ಹಾಗೂ ಮೊಹಾಲಿಗಳಲ್ಲಿ 'ನ್ಯಾನೊ ವಿಜ್ಞಾನ ಕೇಂದ್ರ' ಆರಂಭಕ್ಕೆ ತಲಾ 100 ಕೋಟಿ ರೂ. ಮಂಜೂರು ಮಾಡಿದೆ. ರಾಜ್ಯ ಸರ್ಕಾರ ತುಮಕೂರು ರಸ್ತೆ ಬಳಿ 14 ಎಕರೆ ಜಾಗ ಮಂಜೂರು ಮಾಡಿದ್ದು, ಜವಾಹರಲಾಲ್ ನೆಹರು ಸುಧಾರಿತ ವಿಜ್ಞಾನ ಸಂಶೋಧನಾ ಕೇಂದ್ರಕ್ಕೆ (ಜೆಎನ್‌ಸಿಎಎಸ್‌ಆರ್) ಹಸ್ತಾಂತರಿಸಿದೆ ಎಂದು ತಿಳಿಸಿದರು.

ಕಾಮಗಾರಿ ಶೀಘ್ರ ಆರಂಭವಾಗಲಿದ್ದು, ಇನ್ನೆರಡು ವರ್ಷಗಳಲ್ಲಿ ಕೇಂದ್ರ ಕಾರ್ಯಾಚರಿಸಲಿದೆ ಎಂದು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಪ್ರಧಾನ ಕಾರ್ಯದರ್ಶಿ ಅಶೋಕ ಸಿ. ಮನೋಳಿ ತಿಳಿಸಿದರು.

ಸಮಾವೇಶ: ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ ಹಾಗೂ ಜವಾಹರಲಾಲ್ ನೆಹರು ಸುಧಾರಿತ ವಿಜ್ಞಾನ ಸಂಶೋಧನಾ ಕೇಂದ್ರ (ಜೆಎನ್‌ಸಿಎಎಸ್‌ಆರ್) ಹಾಗೂ ಎಂಎಂ ಆಕ್ಟಿವ್ ಸೈ-ಟೆಕ್ ಕಮ್ಯುನಿಕೇಷನ್ಸ್ ಕಂಪೆನಿಯ ಸಹಯೋಗದಲ್ಲಿ 2008ರ ಡಿಸೆಂಬರ್ 12ರಿಂದ 14ರವರೆಗೆ ಗ್ರಾಂಡ್ ಅಶೋಕ ಹೋಟೆಲಿನಲ್ಲಿ ಬೆಂಗಳೂರು ನ್ಯಾನೊ ನಡೆಯಲಿದೆ. ಈ ಬಾರಿಯ ಸಮಾವೇಶದ ದೃಷ್ಟಿಕೋನ ಭಾರತದ ಭವಿಷ್ಯದಲ್ಲಿ ನ್ಯಾನೊ ತಂತ್ರಜ್ಞಾನದ ಪಾತ್ರ ಎಂದು ಎಂಎಂ ಆಕ್ಟಿವ್‌ನ ವ್ಯವಸ್ಥಾಪಕ ನಿರ್ದೇಶಕ ಜಗದೀಶ್ ಪಟೇಂಕರ್ ತಿಳಿಸಿದರು.

ನ್ಯಾನೊ ತಂತ್ರಜ್ಞಾನದ ಹೊಸ ಆವಿಷ್ಕಾರ, ಸುಧಾರಣೆಗಳ ಬಗ್ಗೆ ಮಾಹಿತಿ ನೀಡಲು ಸಂಶೋಧಕರು, ಶಿಕ್ಷಣತಜ್ಞರು, ಉದ್ಯಮಿಗಳು, ಬಂಡವಾಳ ಹೂಡಿಕೆದಾರರಿಗೆ ಕಾರ್ಯಕ್ರಮ ಅವಕಾಶ ನೀಡಲಿದೆ. ಭಾರತದ ಭವಿಷ್ಯದಲ್ಲಿ ಅದರಲ್ಲೂ ಕೈಗಾರಿಕೆ ಹಾಗೂ ಉದ್ಯಮ, ಪರಿಸರ ಮತ್ತು ವಿದ್ಯುತ್ ಕ್ಷೇತ್ರ, ಆರೋಗ್ಯ, ಆಹಾರ ಮತ್ತು ಕೃಷಿ, ಸಂವಹನ ತಂತ್ರಜ್ಞಾನ, ಎಲೆಕ್ಟ್ರಾನಿಕ್ಸ್, ರಸಾಯನಶಾಸ್ತ್ರ ಕ್ಷೇತ್ರಗಳಲ್ಲಿ ಬದಲಾವಣೆ ಬಗ್ಗೆ ಈ ಸಮಾವೇಶ ಹೆಚ್ಚು ಗಮನ ಕೇಂದ್ರೀಕರಿಸಲಿದೆ ಎಂದು ಸಮಾವೇಶ ಸಮಿತಿ ಅಧ್ಯಕ್ಷ ಅಜಯ್ ಸೂದ್ ಹೇಳಿದರು.